*ಬೆಂಗಳೂರು, ನಿಮ್ಮ ಪಿನ್‌ಕೋಡ್ ಯಾವುದು?*

**BNP ಪರಿಬಾಸ್ ಇಂಡಿಯಾ ಫೌಂಡೇಶನ್ ಸಹಕಾರದಲ್ಲಿ**

**ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (IFA)**

**ಪ್ರಸ್ತುತಪಡಿಸುವ**

**ಪ್ರಾಜೆಕ್ಟ್ 560 ಉತ್ಸವ**

## ಉತ್ಸವದ ಕುರಿತು

**ಬೆಂಗಳೂರಿನ ವಿವಿಧ ಕಥೆಗಳು, ಸ್ಥಳಗಳು, ನೆನಪುಗಳು, ಜನರು ಮತ್ತು ಇತಿಹಾಸಗಳನ್ನು** ಅನ್ವೇಷಿಸಿ ! IFA ಒಂದು ವಿಶಿಷ್ಟ ಪರಿಕಲ್ಪನೆಯಾದ ಪ್ರಾಜೆಕ್ಟ್ 560 ಬೆಂಗಳೂರು ನಗರದ ಮೇಲೆ ಕೇಂದ್ರೀಕೃತವಾಗಿದ್ದು, ತಮ್ಮ ನೆರೆಹೊರೆಗಳು, ಸಾಂಸ್ಕೃತಿಕ ಸ್ಥಳಗಳು ಮತ್ತು ಪರಿಸರದೊಂದಿಗೆ ಆಳವಾಗಿ ತೊಡಗಿಸಿಕೊಳ್ಳಲು ಕಲಾವಿದರು, ವಿದ್ವಾಂಸರು ಮತ್ತು ನಾಗರಿಕರನ್ನು ಒಟ್ಟುಗೂಡಿಸುತ್ತದೆ. ಈ ತೊಡಗಿಕೊಳ್ಳುವಿಕೆಯ ಮೂಲಕ, ಈ ಯೋಜನೆಯು ಶಾಶ್ವತ ಸಂಪರ್ಕಗಳನ್ನು ಬೆಳೆಸಲು ಮತ್ತು ವಿಕಸನಗೊಳ್ಳುತ್ತಿರುವ ನಮ್ಮ ನಗರದ ಅಸ್ಮಿತೆಯ ಸುತ್ತ ನಿರ್ಣಾಯಕ ಸಂಭಾಷಣೆಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತದೆ.

ಆಳದಲ್ಲಿ, ಪ್ರಾಜೆಕ್ಟ್ 560 ಬೆಂಗಳೂರಿನ ಕಲಾತ್ಮಕ, ಸಾಂಸ್ಕೃತಿಕ, ಸಾಮಾಜಿಕ-ರಾಜಕೀಯ ಮತ್ತು ಪರಿಸರದ ವಾಸ್ತವಗಳನ್ನು ಪ್ರತಿಬಿಂಬಿಸುವ ಹಾಗೂ ಅವುಗಳಿಗೆ ಪ್ರತಿಕ್ರಿಯಿಸುವ ಕಲಾತ್ಮಕ ಮತ್ತು ಸಾಂಸ್ಕೃತಿಕ ಪ್ರಕ್ರಿಯೆಗಳನ್ನು ಸೃಷ್ಟಿಸಲು ಬದ್ಧವಾಗಿದೆ. ಕೇವಲ ವೈಯಕ್ತಿಕ ಯೋಜನೆಗಳನ್ನು ಬೆಂಬಲಿಸುವುದಕ್ಕಿಂತ ಹೆಚ್ಚಾಗಿ IFA ಈ ಕಾರ್ಯಕ್ರಮದ ಮೂಲಕ ನಗರದ ಸಾಂಸ್ಕೃತಿಕ ಭೂಮಿಕೆಯಲ್ಲಿ ಸಕ್ರಿಯ ಮತ್ತು ಪರಿವರ್ತಕ ಪಾತ್ರವನ್ನು ವಹಿಸಲು ಪ್ರಯತ್ನಿಸುತ್ತದೆ. ಈ ಉತ್ಸವವು ಏಳು ವರ್ಷಗಳ ಈ ಯೋಜನೆ ಮತ್ತು ಅದರ ಪ್ರಭಾವವನ್ನು ಪ್ರತಿಬಿಂಬಿಸುತ್ತದೆ, ಹೊಸ ದಿಕ್ಕುಗಳನ್ನು ಮರುರೂಪಿಸುತ್ತದೆ.

ಈ ಉತ್ಸವದಲ್ಲಿ ನಮ್ಮ ಊರನ್ನು ಕುರಿತು IFA ಬದ್ಧತೆಯಿಂದ ಹುಟ್ಟಿರುವ ಕೆಲಸದ ವಿಸ್ತಾರ ಮತ್ತು ವೈವಿಧ್ಯತೆಯನ್ನು ಬಿಂಬಿಸುವ, ಮತ್ತು ನಗರದಾದ್ಯಂತ ಹಲವು ಸ್ಥಳಗಳಲ್ಲಿ ಪ್ರದರ್ಶಿಸಲ್ಪಡುವ, **36 ಕ್ಯುರೇಟೆಡ್ ಯೋಜನೆಗಳನ್ನು** ಅನುಭವಿಸಲು ನಾವು ನಿಮ್ಮನ್ನು ಆಹ್ವಾನಿಸುತ್ತೇವೆ

**ಈ ಉತ್ಸವವು ನಡಿಗೆಗಳು, ಕಾರ್ಯಾಗಾರಗಳು, ನಾಟಕೀಯ ವಾಚನಗೋಷ್ಠಿಗಳು, ಸಂವಾದಾತ್ಮಕ ಆಟಗಳು, ಭಾಷಣಗಳು, ಸಂಭಾಷಣೆಗಳು ಮತ್ತು ಪ್ರದರ್ಶನಗಳ** ವರ್ಣರಂಜಿತ ಸಂಯೋಜನೆಗಳನ್ನು ಒಳಗೊಂಡಿವೆ. ಪ್ರತಿಯೊಂದು ಕಾರ್ಯಕ್ರಮವು ನಗರದ ನಿವಾಸಿಗಳನ್ನು - ಸಾರ್ವಜನಿಕ ಸ್ಥಳಗಳನ್ನು ಹೊಸರಿತಿಯಲ್ಲಿ ಕಲ್ಪಿಸಿಕೊಳ್ಳುವುದು, ಸ್ಥಳೀಯ ಇತಿಹಾಸಗಳನ್ನು ಮರುಪರಿಶೀಲಿಸುವುದು ಮತ್ತು ನಗರದ ಸಾಂಸ್ಕೃತಿಕ ಜೀವನದಲ್ಲಿ ಭಾಗವಹಿಸುವುದ - ಮೂಲಕ ತಮ್ಮ ಸುತ್ತಲಿನ ಪರಿಸರದೊಂದಿಗೆ ಹೊಸಥಾದ ಮತ್ತು ಸೃಜನಾತ್ಮಕ ರೀತಿಗಳಲ್ಲಿ ತೊಡಗಿಸಿಕೊಳ್ಳಲು ಆಹ್ವಾನಿಸುವಂತೆ ವಿನ್ಯಾಸ ಮಾಡಲಾಗಿದೆ.

**ನಮ್ಮ 560. ನಮ್ಮ ಯೋಜನೆ. ನಮ್ಮ ಪಿನ್ ಕೋಡ್**